ಎಪಿಎಂಸಿಗಳಲ್ಲಿ ಪಾರದರ್ಶಕ ಆಡಳಿತಕ್ಕೆ ಒತ್ತು | 47 ಲಕ್ಷ ರೈತರ ನೋಂದಣಿ

# ರೈತ ಉತ್ಪನ್ನಕ್ಕೆ ಬೆಲೆ ತಂದ ಇ-ಮಾರ್ಕೆಟ್

■ **ಆರ್. ತುಳಸಿಕುಮಾರ್** ಬೆಂಗಳೂರು

ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ)ಗಳಲ್ಲಿ 'ಇ-ಮಾರುಕಟ್ಟೆ' ವ್ಯವಸ್ಥೆ ಜಾರಿಗೆ ಬಂದ ನಂತರ ರೈತರು ಬೆಳೆದ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಸಿಗುವ ಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಮಧ್ಯವರ್ತಿಗಳ ಹಾವಳಿ ಕಡಿಮೆಯಾಗಿ ರೈತರಿಗೆ ಸ್ಪರ್ಧಾತ್ಮಕ ಬೆಲೆಗಳು ಕೈಗೆಟುಕುವಂತಾಗಿದೆ.

ದೇಶದಲ್ಲೇ ಮೊದಲ ಬಾರಿಗೆ ರಾಜ್ಯದ ಎಪಿಎಂಸಿಗಳಲ್ಲಿ ಆನ್‌ಲೈನ್ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇದರಿಂದಾಗಿ ಅಂದಿನ ಧಾರಣೆ ಆಧರಿಸಿ ರೈತರು ಉತ್ಪನ್ನಗಳನ್ನು ಮಾರಾಟ ಮಾಡಬಹುದಾಗಿದೆ. ಸೂಕ್ತ ದರ ಸಿಗದಿದ್ದಲ್ಲಿ ಮಾರಾಟಕ್ಕೆ ನಿರಾಕರಿಸಿ ಮತ್ತೊಂದು ದಿನ ಬಿಕರಿಗೂ ಅವಕಾಶ ಇದೆ. ಈ ಕ್ರಮದಿಂದಾಗಿ ರೈತರಿಗೆ ಹೆಚ್ಚಿನ ಆದಾಯ ಗಳಿಸುವ ಅವಕಾಶಗಳು ತೆರೆದುಕೊಂಡಿವೆ.

ರಾಷ್ಟ್ರೀಯ ಇ-ಮಾರುಕಟ್ಟೆ ಸೇವಾ ಸಂಸ್ಥೆ (ಆರ್‌ಇಎಂಎಸ್) ನಡೆಸಿರುವ ಆಂತರಿಕ ಪರಿಶೀಲನೆ ವೇಳೆ 20 ವಿಧದ ಉತ್ಪನ್ನಗಳ ಬೆಲೆಗಳಲ್ಲಿ ಸರಾಸರಿ ಶೇ.15-45ರಷ್ಟು ಹೆಚ್ಚಳ ಕಂಡು ಬಂದಿದೆ. ತೊಗರಿ-ಶೇ. 70-80, ಕಡಲೆ ಬೇಳೆ ಶೇ. 40-50, ಉದ್ದು-ಶೇ. 40-72, ನೆಲಗಡಲೆ-ಶೇ. 35-47, ಜೋಳ-ಶೇ. 22-33, ಮೆಣಸಿನಕಾಯಿ-ಶೇ.62ರಷ್ಟು ಬೆಲೆ ಏರಿಕೆ ಕಂಡಿದೆ. ನೀತಿ ಆಯೋಗ ಕೂಡ ಕರ್ನಾಟಕದ ರೈತರು ಹೊಸ ವ್ಯವಸ್ಥೆ ಅಡಿ ಕೃಷಿ ಉತ್ಪನ್ನಗಳಿಗೆ ಹಿಂದಿಗಿಂತ ಹೆಚ್ಚಿನ ಬೆಲೆ ಪಡೆಯುತ್ತಿದ್ದಾರೆ ಎಂಬುದನ್ನು ಕೇಂದ್ರ ಸರಕಾರದ ಗಮನಕ್ಕೆ ತಂದಿದೆ. ಕರ್ನಾಟಕದ ಇ-ಮಾರುಕಟ್ಟೆ ವ್ಯವಸ್ಥೆಯನ್ನು ಕೇಂದ್ರ ಸರಕಾರ 'ಇ-ನ್ಯಾಮ್' ಅಡಿ ದೇಶಾದ್ಯಂತ ವಿಸ್ತರಿಸಿದೆ.



'ಇ-ಮಾರುಕಟ್ಟೆ' ಜಾಲದ ವಿವರ

| | | |
|---|---|---|
| 157 ರಾಜ್ಯದಲ್ಲಿನ ಒಟ್ಟು ಎಪಿಎಂಸಿ | 47 ಲಕ್ಷ ನೋಂದಾಯಿತ ರೈತರು | 32 ಸಾವಿರ ನೋಂದಾಯಿತ ವರ್ತಕರು |

57,500 ಕೋಟಿ ರೂ. 3 ವರ್ಷದ ವಹಿವಾಟು

## ದಾಖಲೆ ವಹಿವಾಟು

ಇ-ಮಾರುಕಟ್ಟೆ ವ್ಯವಸ್ಥೆ ಜಾರಿಗೆ ಬಂದು ಮೂರು ವರ್ಷಗಳು ಸಂದಿವೆ. ಈ ಅವಧಿಯಲ್ಲಿ ಒಟ್ಟು 57,500 ಕೋಟಿ ರೂ. ಮೊತ್ತದ ದಾಖಲೆಯ ವಹಿವಾಟು ನಡೆದಿದೆ. ಇದರಿಂದಾಗಿ ಎಪಿಎಂಸಿಗಳಿಗೂ ಶುಲ್ಕದ ರೂಪದಲ್ಲಿ ಹಣ ಸಂಗ್ರಹ ಹೆಚ್ಚಿದೆ.

2013-14ರಲ್ಲಿ 386.48 ಕೋಟಿ ರೂ. ಶುಲ್ಕ ವಸೂಲಾಗಿದ್ದು, 2016-17ನೇ ಸಾಲಿನಲ್ಲಿ 511 ಕೋಟಿ ರೂ.ಗೆ ಏರಿದೆ. ಎಪಿಎಂಸಿಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ಪ್ರತ್ಯೇಕ ಅನುದಾನ ಕೂಡ ಬಿಡುಗಡೆ ಮಾಡಲಾಗುತ್ತಿದೆ. ಉತ್ಪನ್ನ ಮಾರಲು ಬರುವ ರೈತರಿಗೂ ನಾನಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈವರೆಗೆ 47 ಲಕ್ಷ ರೈತರು ಇ-ಮಾರುಕಟ್ಟೆ ಅಡಿ ನೋಂದಾಯಿಸಿಕೊಂಡಿದ್ದು, ಗ್ರಾ.ಪಂ. ವ್ಯಾಪ್ತಿಯಲ್ಲಿ ಕೃಷಿಕರಿಗೆ ಜಾಗೃತಿ ಸಭೆಗಳನ್ನು ಆಯೋಜಿಸಲಾಗುತ್ತಿದೆ.

ಇ-ಮಾರುಕಟ್ಟೆಯಿಂದಾಗಿ ಎಪಿಎಂಸಿಗಳಲ್ಲಿ ಪಾರದರ್ಶಕ ವಹಿವಾಟಿದೆ. ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ಸಿಗುತ್ತಿದೆ. ವಹಿವಾಟಿನ ದಿನವೇ ಬ್ಯಾಂಕ್ ಖಾತೆಗೆ ಹಣ ಲಭಿಸುತ್ತಿದೆ. ಗುಣ ನಿಯಂತ್ರಣಕ್ಕೆ ಹೆಚ್ಚು ಒತ್ತು ನೀಡಿದೆ.
**- ಮನೋಜ್ ರಾಜನ್**, ಆರ್‌ಇಎಂಎಸ್‌ನ ಎಂಡಿ ಹಾಗೂ ಸಿಇಒ

ಎಪಿಎಂಸಿಗಳಲ್ಲಿ ವಿದ್ಯುನ್ಮಾನ ಮಾಪನ ಯಂತ್ರ ಬಳಕೆ, ಗಣಕೀರಣದಿಂದಾಗಿ ವ್ಯಾಪಾರದಲ್ಲಿ ಪಾರದರ್ಶಕತೆ ಬಂದಿದೆ. ಪೂರ್ಣ ಹಣ ರೈತರ ಖಾತೆಗೆ ಬರುತ್ತಿದೆ. ಮಧ್ಯವರ್ತಿಗಳೇ ಮಾಯವಾಗಿದ್ದಾರೆ.
**- ಶ್ರೀನಿವಾಸ್** ರೈತ, ಹುಬ್ಬಳ್ಳಿ

ಏಕೀಕೃತ ಮಾರುಕಟ್ಟೆ ವ್ಯವಸ್ಥೆಯಿಂದಾಗಿ ಕಚೇರಿಯಲ್ಲೇ ಕುಳಿತು ನಾನಾ ಎಪಿಎಂಸಿಗಳಲ್ಲಿ ವಹಿವಾಟು ನಡೆಸಬಹುದು. ಇದರಿಂದ ಸಮಯ ಉಳಿಯುತ್ತಿದೆ. ಗುಣಮಟ್ಟ ಆಧರಿಸಿ ಖರೀದಿಗೂ ಅವಕಾಶ ನೀಡಿರುವುದು ಒಳ್ಳೆಯ ನಡೆಯಾಗಿದೆ.
**- ವೀರೇಂದ್ರ**, ವ್ಯಾಪಾರಿ, ಚಿತ್ರದುರ್ಗ